ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,ಮಂಡ್ಯ ವಿಭಾಗ, ಮಂಡ್ಯ

ಸುಭಾಷ್ ನಗರ, 6ನೇ ಅಡ್ಡರಸ್ತೆ, ಮಂಡ್ಯ–571401, 08232-220630,fax:08232-224921 dcfmandya@gmail.com

ಸಂ:ಸಿ1/ಲ್ಯಾಂಡ್/ಜಿ.ಎಲ್–1901/2012–13 ದಿನಾಂಕ: 24/08/2021

ಗೆ,

ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಮೈಸೂರು ವೃತ್ತ
ಮೈಸೂರು.

ಮಾನ್ಯರೇ,

ವಿಷಯ: Diversion of 0.0909 Ha (revised from 0.1818 ha) of forest land in sy. no. 10 of Pandavapura Village Mandya District for Construction of Ambedkar Bhavan by social welfare Department in pandavapura Town in favour of Assistant Director, Department of social welfare, Pandavapura, Mandya District Proposal No. FP/KA/Others/ 29220/2017

ಉಲ್ಲೇಖ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅ.ಸಂ.ಕ.) ಬೆಂಗಳೂರು ರವರ ಪತ್ರ ಸಂಖ್ಯೆ: KFD/HOFF/A5-3(GFL)10/2018-FC ದಿನಾಂಕ: 27/01/2021

2. ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ ರವರ ಪತ್ರ ಸಂಖ್ಯೆ: ಸನಿ:ಸಕಿ:ಮಂ:ಸಿಡಬ್ಲ್ಯು3:ಅಂಭ:ಸಿಆರ್– /2017–18 ದಿನಾಂಕ: 23/06/2021

*-*-*-*-*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅ.ಸಂ.ಕ.) ಬೆಂಗಳೂರು ರವರು ಸದರಿ ಯೋಜನೆಗೆ ಸಂಬಂದಿಸಿದಂತೆ ಕೇಂದ್ರ ಸರ್ಕಾರವು ತಿಳಿಸಿರುವ ಮೂರು ಅಂಶಗಳ ಆಕ್ಷೇಪಣೆಗಳಿಗೆ ಮಾಹಿತಿ / ದಾಖಲಾತಿಗಳನ್ನು ಎಫ್.ಸಿ. ವೆಬ್ ಪೋರ್ಟ್‌ಲ್‌ನಲ್ಲಿ ಅಪ್ ಲೋಡ್ ಮಾಡಲು ತಿಳಿಸಿರುತ್ತಾರೆ.

ಉಲ್ಲೇಖ (2) ರಲ್ಲಿ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ ರವರು ಮೂರು ಅಂಶಗಳಿಗೆ ಸಂಬಂಧಪಟ್ಟಂತೆ ವರದಿಯನ್ನು ಈ ಕಛೇರಿಗೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪಾಂಡವಪುರ ಟೌನ್‌ನಲ್ಲಿರುವ ಸರ್ವೆ ನಂ. 10 ರ ನಿವೇಶನವು ಭವನ ನಿರ್ಮಾಣ ಮಾಡಲು ಸೂಕ್ತ ಜಾಗವಾಗಿದ್ದು, ಪಟ್ಟಣದ ಮಧ್ಯ ಭಾಗದಲ್ಲಿದ್ದು, ಅನುಕೂಲವಾಗಿರುತ್ತದೆ. ಈ ನಿವೇಶನ ಹೊರತುಪಡಿಸಿ ಕಂದಾಯ ಇಲಾಖೆಯ ಯಾವುದೇ ಜಾಗಗಳು ಭವನ ನಿರ್ಮಾಣ ಮಾಡಲು ಸೂಕ್ತವಾಗಿರುವುದಿಲ್ಲ ಹಾಗೂ ಹಾರೋಹಳ್ಳಿ ಸರ್ವೆ ನಂ. 13 ರಲ್ಲಿ ಗುರುತಿಸಿರುವ ಬದಲಿ ಜಾಗವು ಟೌನ್ ಪ್ರದೇಶದಿಂದ ದೂರದಲ್ಲಿದ್ದು, ಭವನ ನಿರ್ಮಾಣ ಮಾಡುವುದಕ್ಕೆ ಸೂಕ್ತವಾಗಿರುವುದಿಲ್ಲ. ಸರ್ವೆ ನಂಬರ್ 10 ರ ಪ್ರದೇಶವು ಎಲ್ಲ ವಿಧದಲ್ಲೂ ಭವನ ನಿರ್ಮಾಣಕ್ಕೆ ಸೂಕ್ತವಾಗಿದ್ದು, ಸಾರ್ವಜನಿಕರಿಗೆ ಅನುಕೂಲವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

..2/-

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ: 16/09/2021 ರಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಪಾಂಡವಪುರ ರವರ ಜೊತೆ ಸ್ಥಳ ಪರಿಶೀಲನೆ ಮಾಡಿದ್ದು, ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಗುರುತಿಸಿರುವ ಪಾಂಡವಪುರ ಗ್ರಾಮದ ಸರ್ವೆ ನಂ. 10 ರ ಪ್ರದೇಶದ ಸ್ಥಳ ಪರಿಶೀಲಿಸಿರುತ್ತೇನೆ. ಸದರಿ ಪ್ರದೇಶವು ಪಾಂಡವಪುರ ಪಟ್ಟಣದ ಮಧ್ಯ ಭಾಗದಲ್ಲಿದ್ದು, ಎಲ್ಲ ವಿಧದಲ್ಲೂ ಭವನ ನಿರ್ಮಾಣಕ್ಕೆ ಸೂಕ್ತವಾದ ಪ್ರದೇಶವಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅದ್ಯ ಗಮನಕ್ಕೆ ತರಬಯಸುತ್ತಾ, ಪ್ರಸ್ತಾಪಿತ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980 ಸೆಕ್ಷನ್ (2) ರಡಿ ಉಪಯೋಗಿ ಸಂಸ್ಥೆಯವರಿಗೆ ಬಿಡುಗಡೆಗೊಳಿಸಬಹುದಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಡ್ಯ ವಿಭಾಗ, ಮಂಡ್ಯ.


Latitude: 12.497777
Longitude: 76.67297
Elevation: 743.49±3 m
Accuracy: 45.7 m
Time: 09-16-2021 14:42
Note: s.no.10.p.pura
Powered by NoteCam